ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಹಾಗೂ ಮುರಗೋಡ-ಇಂಚಲ ರಸ್ತೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಕೆಲಸಗಳನ್ನು ಈ ಹಿಂದೆ ಸರ್ಕಾರ ಒಪ್ಪಿಕೊಂಡಂತೆ ಕೂಡಲೇ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ:

ಆ) ಇನ್ನೂ ಎಷ್ಟು ದಿನಗಳೊಳಗಾಗಿ ಈ ಕೆಲಸಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ 2001,2002 ಹಾಗೂ 2003 ರಲ್ಲಿ ವಾಡಿಕೆಗಿಂತ ತೀರ ಕಡಿಮೆ ಮಳೆಯಾಗಿದೆ. ಆದ್ದರಿಂದ ಅತೀವೃಷ್ಟಿ ಆಗದಿರುವುದರಿಂದ. ಪ್ರಕೃತಿ ವಿಕೋಪ ನಿಧಿಯಡಿ ಈ ಕಾಮಗಾರಿಗೆ ಮಂಜೂರಾತಿ ನೀಡಿಲ್ಲ

ಆ) ಮೇಲೆ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ರಸ್ತೆಗಳ ಅಭಿವೃದ್ಧಿ

3317 (3763) : ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಅಭಿವೃದ್ಧಿಪಡಿಸಲು ತೆಗೆದುಕೊಂಡಿರುವ ರಸ್ತೆಗಳು ಯಾವುವು; ಕ್ಷೇತ್ರವಾರು ವಿವರ ನೀಡುವುದು;

ಆ) ಈ ರಸ್ತೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲದಿದ್ದಲ್ಲಿ, ಯಾವ ಯಾವ ಹಂತದ ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ಕೈಬಿಟ್ಟು ಹೋಗಿರುತ್ತದೆ; ಕೈಬಿಟ್ಟು ಹೋಗಲು ಕಾರಣವೇನು; ಈ ರೀತಿ ಕೈಬಿಟ್ಟಿರುವ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ; ಪೂರ್ಣ ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ 5 ಕಾಮಗಾರಿಗಳನ್ನು ಮೈಸೂರು ಜಿಲ್ಲೆಯಲ್ಲಿ 4 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಪ್ರತಿ ಕಾಮಗಾರಿಗೆ ಅನುದಾನದ ಮಿತಿ ನಿಗದಿಪಡಿಸಿರುವುದರಿಂದ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗಿರುವುದಿಲ್ಲ. ಆಯ್ದ ಭಾಗಗಳಲ್ಲಿ ಮಾತ್ರ ಅನುಧಾನಕ್ಕನುಗುಣವಾಗಿ ರಸ್ತೆಯ ಸ್ಥಿತಿಯನ್ನು ಅವಲಂಬಿಸಿ ಅತಿ ಅವಶ್ಯಕ ಐಟಂಗಳನ್ನು ಅಳವಡಿಸಿ ಅಭಿವೃದ್ಧಿ ಪಡಿಸಲಾಗಿದೆ. ಕೈಬಿಟ್ಟಿರುವ ಉದ್ದವನ್ನು ಲೋಕೋಪಯೋಗಿ ಇಲಾಖೆಯು ಎಂದಿನಂತೆ ನಿರ್ವಹಣೆ ಮಾಡುವುದು.

ಅನುಬಂಧ - 1

ಕ್ರಮ ಸಂಖ್ಯೆ	ಮತ ಕ್ಷೇತ್ರ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
		ಚಾಮರಾಜನಗರ ಜಿಲ್ಲೆ	
1.	ಸಂತೆಮರಳ್ಳಿ	ರಾ.ಹೆ. 209 ರಿಂದ 212 ರವರೆಗಿನ ಜಿಲ್ಲಾ ಮುಖ್ಯ ರಸ್ತೆ ಚಾಮರಾಜನಗರ ಜಿಲ್ಲೆಯ ಸಂತೇಮಾರಳ್ಳಿ	50.00

1	2	3	4
		ನಂಜನಗೂಡು ಮಾರ್ಗವಾಗಿ ಒಮ್ಮಟ್ಟೂರು ಮತ್ತು ಕೌಲಂಡೆ ರಸ್ತೆ ಅಭಿವೃದ್ಧಿ –6 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	
2.	ಗುಂಡ್ಲುಪೇಟೆ	ಚಾಮರಾಜನಗರ –ಚಾಮರಾಜನಗರ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ – 9.7 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	50.00
3.	ಕೊಳ್ಳೇಗಾಲ	ಕೊಳ್ಳೇಗಾಲ ತಾಲ್ಲೂಕು ಸತ್ಯಗಾಲ ಹ್ಯಾಂಡ್ ಪೋಸ್ಟ್ ನಿಂದ ಭರ ಚುಕ್ಕಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 4.35 ಕಿ.ಮೀ. (ಆಯ್ದ ಭಾಗಗಳ ಅಭಿವೃದ್ಧಿ)	30.00
4.	ಹನೂರು	ಕೊಳ್ಳೇಗಾಲ ತಾಲ್ಲೂಕು ಕೊಳ್ಳೇಗಾಲ – ಚಲ್ಲಪಾಳ್ಯ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 7.1 ಕಿ.ಮೀ. ಆಯ್ದ ಭಾಗಗಳ ಅಭಿವೃದ್ಧಿ)	80.00
5.	ಚಾಮರಾಜನಗರ	ಸರಗೂರು – ಹನೂರು ರಸ್ತೆ ಅಭಿವೃದ್ಧಿ –8 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	61.00
		ಮೈಸೂರು ಜಿಲ್ಲೆ	
6.	ಬನ್ನೂರು	ತಲಕಾಡು – ಮಡವಾಡಿ – ಬೆಳಕವಾಡಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ 11.9 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	80.00
7.	ಟೀ–ನರಸೀಪುರ	ನಂಜನಗೂಡು–ಟೀ–ನರಸೀಪುರ ರಸ್ತೆ ಕಿ.ಮೀ 20.82 ರಿಂದ 27.30 ರಸ್ತೆ ಅಭಿವೃದ್ಧಿ 4.7 ಕಿ.ಮೀ	50.00
8.	ಕೆ.ಆರ್. ನಗರ	ಅಕ್ಕಿಹೆಬ್ಬಾಳ – ಬೀರಯ್ಯ ಸಾಲಿಗ್ರಾಮ ರಸ್ತೆ ಕಿ.ಮೀ 3.22 ರಿಂದ 15.4 ವರೆಗೆ ರಸ್ತೆ ಅಭಿವೃದ್ಧಿ–10.2 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	75.00
9.	ನಂಜನಗೂಡು	ನಂಜನಗೂಡು – ಯೆಡಗಾಲ – ಹುಲಹಳ್ಳಿ – ಹಚ್ಚೀಪುರ ಕಿ.ಮೀ 16.00 ರಿಂದ 27.00 ರಸ್ತೆ ಅಭಿವೃದ್ಧಿ 11 ಕಿ.ಮೀ (ಆಯ್ದ ಭಾಗಗಳ ಅಭಿವೃದ್ಧಿ)	55.00

ಚಾಮರಾಜನಗರ ತಾಲ್ಲೂಕಿನಲ್ಲಿ ಕಾಲೋನಿಗಳ ನಿರ್ಮಾಣ

3318 (3764) : ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಯಳಂದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಹೊಸ ಕಾಲೋನಿಗಳನ್ನು ನಿರ್ಮಿಸಿ ಬಡ ಫಲಾನುಭವಿಗಳಿಗಾಗಿ ನೀಡಲಾಗಿರುವ ಭೂಮಿಯನ್ನು ಅರಣ್ಯ ಇಲಾಖೆಯೊಡನೆ ಜಂಟಿಯಾಗಿ ಸರ್ವೆ ಮಾಡಿಸಿ, ಹದ್ದಬಸ್ತು ಮಾಡಿಕೊಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು; ಯಾವಾಗ ಮಾಡಲಾಗುವುದು?